ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬಳ್ಳಾರಿಗೆ ಮಾರ್ಚ್ ತಿಂಗಳಿನಲ್ಲಿ ೪೪೩ ಮತ್ತು ಏಪ್ರಿಲ್ ತಿಂಗಳಿನಲ್ಲಿ ೨೪೭ ಟ್ರಿಪ್‌ಗಳನ್ನು ಲೈಸನ್ಸ್‌ದಾರರಿಗೆ ಕೊಟ್ಟಿದೆ ಆದರೆ ಬೆಂಗಳೂರು ಕಾರ್ಪೋರೇಷನ್ನಿನಿಂದ ಎಲ್ಲೆಲ್ಲಿಗೆ ಎಷ್ಟೆಷ್ಟು ಡೈವರ್ಟ್ ಮಾಡಿದೆ ಎನ್ನುವ ಅಂಕ ಅಂಶ ಈಗ ನನ್ನ ಹತ್ತಿರದಲ್ಲಿ ಇಲ್ಲ.

SITES TO SITELESS PEOPLE IN SRIRANGAPATNA TALUK

774. Smt. Damayantsi Boregowda (Srirangapatna).—Will the Minister for Revnenue be pleased to state :—

(*a*) the number of applications for sites received from the houseless people in Srirangapatna taluk.

(*b*) the number of sites distributed and in how many Villages.

(*c*) action taken to expedite the distribution of sites in other villages of Srirangapatna taluk.

(*d*) when the sites would be distributed in Naguvanahalli village of Srirangapatna taluk ?

Sri N. Hutchamasty Gowda (Minister for Revenue).—

(*a*) 122.

(*b*)

1.	Bidarahalli	...	...	58
2.	Mahadevapura	...	...	110
3.	Belagola	...	...	279
4.	Hosur	...	...	62
5.	Melapura	...	...	116
6.	Hebbadi	...	...	
7.	K. R. S.	...	...	321
8.	Maralaegala	...	...	22
9.	Palahalli	...	...	55
10.	Karigatta	...	...	10
11.	Kudalakuppe	...	...	45
12.	Hosanandur	...	...	35
				1,118

(c) Proposal for the acquisition of lands for sites in respect of following villages have been submitted for sanction :—

1. Chindagiri Koppalu
2. Baburayanakoppal
3. Kaparanakoppal
4. Kirangoor for Darasaguppe
5. Manigiboranakoppal
6. Achappanakoppal
7. Ballenahalli
8. Nelamane
9. K. Settihalli
10. Neelanakoppal
11. Sabbanaknppe
12. Chennahalli
13. Chinnayakanahalli
14. Siddapura
15. Chowdahalli
16. T.M. Hosur
17. Garkahalli
18. Gendehosahalli
19. Bannahalli
20. Mundagadore
21. Doddahoruvalli
22. Mallenahalli
23. Ballakere
24 Neralekere
25. Doddapalaya
26. Channanakere
27. Hunlanakere
28. Madarahalli
29. Jakkanahalli
30. Alggod
31. Arakere
32. Chandagalu
33 Naguvanahalli
34. Hosahalli
35. Karekare

(d) The acquisition proposals in respect of Nagauvanahalli village and other villages of Mandya District were received by Government and in the mean while Government contemplated enacting a separate legislation for speedy acquisition of lands, Therefore, further proceeding, were deferred. Now, that the new Act has been enacted, the acquisition proceedings will be finalised under special law.

ಶ್ರೀಮತಿ ದಮಯಂತಿ ಬೋರೇಗೌಡ.—ನನ್ನ ಮೊದಲನೇ ಪ್ರಶ್ನೆಗೆ ಉತ್ತರ ಸರಿಯಿಲ್ಲ ಎನ್ನುವುದನ್ನು ತಾವು ಒಪ್ಪಿಕೊಳ್ಳುತ್ತೀರಾ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದಕ್ಕೆ ನಾನೇ ಉತ್ತರ ಕೊಟ್ಟು ಅದನ್ನು ನಾನು ತಪ್ಪು ಎಂದು ಹೇಗೆ ಒಪ್ಪಿಕೊಳ್ಳುವುದಕ್ಕಾಗುತ್ತದೆ.

ಶ್ರೀಮತಿ ದಮಯಂತಿ ಬೋರೇಗೌಡ.—ಇಡೀ ಶ್ರೀರಂಗಪಟ್ಟಣ ತಾಲ್ಲೂಕಿಗೆ ಈ ಬಗ್ಗೆ ೧೨೨ ಅರ್ಜಿಗಳು ಬಂದಿವೆ ಎನ್ನುವುದು ಸರಿ ಎಂದು ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—೧೨೨ ಅರ್ಜಿಗಳು ಬಂದಿವೆ ಎಂದರೆ ಒಂದೊಂದು ಅರ್ಜಿಯಲ್ಲಿ ೧೨-೨೦-೫೦ ಅರ್ಜಿದಾರರು ಇರುತ್ತಾರೆ. ಆ ರೀತಿ ಒಂದೊಂದು ಬಂದರೂ ಕೂಡ ೧೨೨ ಅರ್ಜಿ ಆಯಿತು.

ಶ್ರೀಮತಿ ದಮಯಂತಿ ಬೋರೇಗೌಡ.—ಹಾಗಾದರೆ ೧೨೨ ಸ್ಥಳಗಳು ಎಂದು ಹೇಳಬಹುದು. ಒಂದು ಅರ್ಜಿಯಲ್ಲಿ ಎಷ್ಟೋ ಜನ ಇರುತ್ತಾರೆ ಎಂದು ಹೇಳುವುದು ಸರಿಯಲ್ಲ. ಅಲ್ಲಿವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಮಾನ್ಯ ಸದಸ್ಯರಿಗೆ ಗೊತ್ತು ಸಾಮಾನ್ಯವಾಗಿ ಒಂದು ಗ್ರಾಮದಲ್ಲಿ ಲ್ಯಾಂಡ್‌ಲೆಸ್ ಮತ್ತು ಹೌಸ್‌ಲಿಸ್ ಪೀಪಲ್ ಎಷ್ಟೋ ಜನ ಇರುತ್ತಾರೆ. ಅದರಲ್ಲಿ ಬಹು ಭಾಗ ಅವರುಗಳೆಲ್ಲಾ ಸೇರಿ ಒಂದೇ ಅರ್ಜಿ ಬರೆಯುತ್ತಾರೆ, ನಮ್ಮ ಊರಿನಲ್ಲಿ ಇಷ್ಟು ಜನಗಳಿಗೆ ಜಮೀನು ಇಲ್ಲ, ಇಷ್ಟು ಜನಗಳಿಗೆ ಸೈಟು ಇಲ್ಲ ಎಂದು ಅರ್ಜಿ ಬರೆಯುತ್ತಾರೆ. ಆ ರೀತಿಯಾದಂಥ ಅರ್ಜಿಗಳು ೧೨೨ ಇವೆ.

ಶ್ರೀಮತಿ ದವಯಂತಿ ಬೋರೇಗೌಡ.—ತಾವು ಕೊಟ್ಟಿರುವ ಉತ್ತರ ಸರಿಯಾಗಿಲ್ಲ ಎಂದು ಒಪ್ಪಿಕೊಂಡರೆ ಒಳ್ಳೆಯದೆಂದು ನಾನು ಹೇಳಂತ್ತೇನೆ. ಲ್ಯಾಂಡ್ ಅಕ್ವಿಜಿಷನ್ ಮುಗಿದಮೇಲೆ ಎಷ್ಟು ತಿಂಗಳುಗಳಲ್ಲಿ ಸೈಟ್ಸ್‌ನ್ನು ಹಂಚುತ್ತೀರಿ ?

೧—೩೦ ಪಿ. ಎಂ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಇರತಕ್ಕ ಕಾನೂನು ಪ್ರಕಾರ ಇದು ಬಹಳ ನಿಧಾನವಾಗ ತ್ತದೆಂದು ತಿಳಿದು, ಇದರ ಉದ್ದೇಶಕ್ಕಾಗಿಯೇ ಪ್ರತ್ಯೇಕವಾದ ಒಂದು ಕಾನೂನು ಕೂಡ ಆಗಿದೆ. ಆದರ ಪ್ರಕಾರ ಈ ಕೆಲಸ ಬೇಗ ಆಗುವುದಕ್ಕೆ ಸಾಧ್ಯವಿದೆ. ಈಗಿನ ಕಾನೂನು ಪ್ರಕಾರ ಭೂಮಿಯನ್ನು ಬೇಗ ಕ್ಲಿಯರ್ ಮಾಡಿಕೊಂಡು ಹಂಚುವುದಕ್ಕೆ ಪ್ರಯತ್ನಮಾಡುತ್ತೇವೆ. ಇದರಿಂದ ಭೂಮಿ ಹಂಚುವ ಕಾರ್ಯ ನಿಧಾನವಾಗುವುದಿಲ್ಲ.

ಶ್ರೀಮತಿ ದವಯಂತಿ ಬೋರೇಗೌಡ.—ಕಾನೂನು ಮಾಡುವುದು ಒಂದು ಕಡೆ ಇರಲಿ ಪ್ರಪೋಸರ್ಸ್ ಅನ್ನು ತರಿಸಿಕೊಳ್ಳುವುದೇ ನಿಧಾನವಾಗಿದೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಅದಕ್ಕೆ ಕಾರಣಗಳನ್ನು ಆಗಲೇ ತಿಳಿಸಿದ್ದೇನೆ. ಮೊದಲು ಕೈಗೊಂಡಿರತಕ್ಕ ಕ್ರಮವನ್ನು ಕೈಬಿಟ್ಟು ಹೊಸದಾಗಿ ಕ್ರಮ ತೆಗೆದುಕೊಂಡಿದ್ದರಿಂದ ಇದು ನಿಧಾನವಾಗಿದೆ. ಇನ್ನು ಮುಂದೆ ನಿಧಾನವಾಗುವುದಕ್ಕೆ ಅವಕಾಶವಿಲ್ಲ.

ಶ್ರೀ ಎಸ್.ಎಚ್. ಪ್ರಟ್ಟರಂಗನಾಥ್.—ಒಟ್ಟು ೧೨೨ ಅರ್ಜಿಗಳು ಬಂದಿವೆ ಎಂದು ತಿಳಿಸಿದ್ದೀರಿ ಇದರಲ್ಲಿ ಒಂದೊಂದು ಅರ್ಜಿಯಲ್ಲಿ ೧೦-೧೫ ಜನರ ಹೆಸರುಗಳು ಇವೆ ಎಂದೂ ಹೇಳಿದ್ದೀರಿ. ಆ ಒಂದ ಅರ್ಜಿಯಲ್ಲಿ ಜಿಮೀನು ಇಲ್ಲದಿರತಕ್ಕವರು ರುಜು ಹಾಕಿದ್ದರೆ ಅವರಿಗೂ ಸೈಟು ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅರ್ಜಿಗೆ ರುಜು ಹಾಕಿದ ಕೂಡಲೇ, ಸೈಟು ತೆಗೆದುಕೊಳ್ಳುವುದಕ್ಕೆ ಹಕ್ಕುದಾರನಾಗುತ್ತಾನೆಂದು ತಿಳಿಯುವ ಹಾಗಿಲ್ಲ. ಯಾರಿಗೆ ಜಮೀನು ಇಲ್ಲ, ಮನೆ ಇಲ್ಲ ಎಂದು ನೋಡಿ ಅಂಥವರಿಗೆ ಕೊಡುತ್ತೇವೆ.

ಶ್ರೀ ಆರ್. ದಯಾನಂದ ಸಾಗರ್.—ಬೆಂಗಳೂರು ನಗರದಲ್ಲಿ ಸೈಟ್‌ಲೆಸ್ ಜನಗಳಿಗೆ ಯಾವ ಏಜನ್ಸಿ ಮುಖಾಂತರ ಸೈಟ್ಸ್‌ನ್ನು ಕೊಡುತ್ತೀರಿ, ಟ್ರಸ್ಟ್‌ಬೋರ್ಡಿನಿಂದಲೋ, ರೆವಿನ್ಯೂ ಡಿಪಾರ್ಟ್‌ಮೆಂಟ್‌ನಿಂದಲೋ ಅಥವಾ ಯಾವ ಡಿಪಾರ್ಟ್‌ಮೆಂಟ್ ಮೂಲಕ ಕೊಡುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ. ಈ ಪ್ರಶ್ನೆ ಶ್ರೀರಂಗ ಪಟ್ಟಣಕ್ಕೆ ಸೀಮಿತವಾಗಿರುವುದು.

SRI R. DAYANAND SAGAR.—I am not asking a particular question. I am asking as to what the policy of the Government is, because, in Bangalore city, there are so many agencies the Corporation, and Trust Board, and the Hon. Minister knows it.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆಯನ್ನು ಹಾಕಿದರೆ, ಅದಕ್ಕೆ ತೃಪ್ತಿಕರವಾದಂಥ ಉತ್ತರವನ್ನು ಕೊಡುತ್ತೇನೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಈಗಾಗಲೇ ೧೨೨ ಅರ್ಜಿಗಳು ಬಂದಿವೆ ಎಂದು ತಿಳಿಸಿದ್ದೀರಿ, ಈ ಯೋಜನೆಯನ್ನು ತ್ವರಿತವಾಗಿ ಮಾಡಬೇಕು ಎನ್ನುವುದು ಸರ್ಕಾರದ ಉದ್ದೇಶ. ಆಲ್ಲಿ ಎಷ್ಟು ಜನರಿಗೆ ಸೈಟ್ ಇಲ್ಲ, ಲ್ಯಾಂಡ್‌ಲೆಸ್ ಇದ್ದಾರೆ ಎನ್ನುವ ವರದಿಯನ್ನಾದರೂ ತರಿಸಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪ್ರಶ್ನೆ ಇರುವುದು, ಎಷ್ಟು ಜನ ಅರ್ಜಿ ಹಾಕಿದ್ದಾರೆ, ಎಷ್ಟು ಜನರಿಗೆ ಸೈಟ್ಸ್‌ನ್ನು ಒದಗಿಸಿದೆ ಎನ್ನುವುದು. ಆಲ್ಲಿ ಎಷ್ಟು ಜನ ಸೈಟ್‌ಲೆಸ್ ಇದ್ದಾರೆ, ಎಷ್ಟು ಜನ ಲ್ಯಾಂಡ್‌ಲೆಸ್ ಇದ್ದಾರೆ ಎನ್ನುವುದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಹಾಕಿದರೆ ಅಂಕಿಅಂಶಗಳನ್ನು ಒದಗಿಸಿ ಕೊಡುತ್ತೇನೆ.